KACM010001992016

Presented on : 07-01-2016
Registered on : 07-01-2016

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**

**SPL.C/1/2016**

Complainant(PROSECUTION):
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

---------------------------------------------------------------------------

State Complainant}: Spl. Public Prosecutor,
Sri. K.S.SHANTHIPRAKASH appearing for Sri. Channabasappa,

---------------------------------------------------------------------------

**Offence punishable under : U/Sec.13(1)(E)r/w13(2)ofPCAct1988.**
**of PREVENTION OF CORRUPTION ACT,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**Spl.C No: 1/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಫಿರೋಜ್ ಖಾನ್ | ಪ್ರಾ.ಸಾ.-38 |
| ತಂದೆಯ ಹೆಸರು | : | ಗುದ್ದು ಖಾನ್ | ಚಾ.ಸಾ.-89 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಫರ್ನಿಚರ್ ಅಂಗಡಿಯಲ್ಲಿ ಕಾರ್ಪೆಂಟರ್ ಕೆಲಸ | |
| ವಾಸ ಸ್ಥಳ | : | ಕಲಬುರಗಿ | |

ದಿನಾಂಕಃ 10-12-2025

ವಿ.ಸಿ.ಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.

(ಕಲಬುರಗಿಯಲ್ಲಿರುವ ಹೆಚ್ ಪಿ ಗ್ಯಾಸ್ ಸಂಸ್ಥೆಯಲ್ಲಿ ಪ್ರೊಪರೈಟರ್ ಕೆಲಸ ಮಾಡುತ್ತಿರುವ ಸಂಜೀವ್ ಕುಮಾರ್ ಎಸ್ ನಂದಗಿ ಅವರು ಆ ರಿಮೋಟ್ ಪಾಯಿಂಟ್ ನಲ್ಲಿಕೋ ಆರ್ಡಿನೇಟರ್ ಎಂದು ಇದ್ದಾರೆ).

ಮುಖ್ಯ ವಿಚಾರಣೆಃ ಶ್ರೀ ವಿ.ಟಿ.ಟಿ. -ವಿಶೇಷ ಪಿ.ಪಿ. ಯವರಿಂದಃ

(ಸಾಕ್ಷಿಯು ಕನ್ನಡ ಬರುವುದಿಲ್ಲವೆಂದು ಹೇಳಿದ್ದು, ಕೋ ಆರ್ಡಿನೇಟರ್ ಆದ ಸಂಜೀವ್ ಕುಮಾರ್ ಎಸ್ ನಂದಗಿ ಅವರ ಸಹಾಯದಿಂದ ಕನ್ನಡದಲ್ಲಿ ಪ್ರಶ್ನೆ ಕೇಳಿದ್ದನ್ನು ಹಿಂದಿಯಲ್ಲಿ ಭಾಷಾಂತರಿಸಿ, ಸಾಕ್ಷಿಗೆ ವಿವರಿಸಿದ್ದು, ಸಾಕ್ಷಿಯು ಕೊಟ್ಟ ಹೇಳಿಕೆಯನ್ನು ಬರೆದುಕೊಳ್ಳಲಾಗಿದೆ).

1. ನಾನು ಭಾರತ್ ಫರ್ನಿಚರ್ ವರ್ಕ್ಸ್ ಎಂಬ ಅಂಗಡಿಯಲ್ಲಿ 20 ವರ್ಷಗಳವರೆಗೆ ಕೆಲಸ ಮಾಡಿದ್ದು, ಈಗ ಸದರಿ ಅಂಗಡಿ ಬಂದ್ ಆಗಿರುತ್ತದೆ.

2. ಚಿಕ್ಕಮಗಳೂರು ಲೋಕಾಯುಕ್ತ ಕಛೇರಿಯಿಂದ ಚನ್ನಬಸಪ್ಪ ಅಂದರೆ ಆರೋಪಿಯು ನಮ್ಮ ಅಂಗಡಿಯಿಂದ ಫರ್ನಿಚರನ್ನು ಖರೀದಿಸಿದ ಬಗ್ಗೆ ಮಾಹಿತಿ ನೀಡಬೇಕೆಂದು ಕೇಳಿದ್ದರು. ಸದರಿ ಆರೋಪಿಯು ನಮ್ಮ ಅಂಗಡಿಯಿಂದ ಒಂದು ಬಿಲ್ ನಲ್ಲಿ ರೂ. 36,000/- ಇನ್ನೊಂದು ಬಿಲ್ ನಲ್ಲಿ ರೂ. 46,000/-ಗಳ ಫರ್ನಿಚರ್ ನ್ನು ಖರೀದಿ ಮಾಡಿದ್ದರು. ಸದರಿ ಬಿಲ್ ನಂಬರ್ ಗಳು 77 ಮತ್ತು 78 ಆಗಿರುತ್ತದೆ.

3. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದಿನಾಂಕಃ 28-03-2014 ರಂದು ಪತ್ರ ಬರೆದು ತಿಳಿಸಿರುತ್ತೇನೆ. ಸಾಕ್ಷಿಗೆ ಸದರಿ ಪತ್ರವನ್ನು ವಿಸಿ ಮೂಲಕ ತೋರಿಸಿದ್ದು, ಸಾಕ್ಷಿಯು ಸಹಿ ತನ್ನದೆಂದು ಗುರುತಿಸಿರುತ್ತಾರೆ. ಸದರಿ ದಾಖಲೆ ಖರ್ಚು ಪುಸ್ತಕದ ಪುಟ ಸಂ.866 ರಲ್ಲಿ ಇದ್ದು, ಸದರಿ ದಾಖಲೆಯನ್ನು ನಿ.ಪಿ.115 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದಃ

4. ಲೋಕಾಯುಕ್ತ ಪೊಲೀಸರು ಮಾಹಿತಿಯನ್ನು ಪತ್ರ ಬರೆದು ಕೇಳಿದ್ದರು. ಸದರಿ ಪತ್ರದ ದಿನಾಂಕಃ ಮಾರ್ಚ್ 2014 ಆಗಿರುತ್ತದೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ. ನಿ.ಪಿ.115 ರ ಪತ್ರವನ್ನು ನನ್ನ ಸ್ನೇಹಿತ ತಯಾರಿಸಿ ಕೊಟ್ಟಿದ್ದಾರೆ. ಭಾರತ್ ಫರ್ನಿಚರ್ ವರ್ಕ್ಸ್ ನಡೆಸಲು ಲೈಸೆನ್ಸ್ ಪಡೆದಿರುತ್ತೇವೆ. ಸದರಿ

ಲೈಸೆನ್ಸನ್ನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿದ್ದೇನೋ ಇಲ್ಲವೋ ನೆನಪಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಬಿಲ್ ನಂ. 77 ಮತ್ತು 78 ರಲ್ಲಿ KST ಅಥವಾ CST ನಂಬರ್ ಇಲ್ಲ. ಸದರಿ ಬಿಲ್‌ಗಳನ್ನು ಲೋಕಾಯುಕ್ತ ಪೊಲೀಸರಿಗೆ ಹಾಜರುಪಡಿಸಿಲ್ಲ.

5. ನಮ್ಮದು ಭಾರತ್ ಫರ್ನಿಚರ್ ವರ್ಕ್ಸ್ ಎನ್ನುವ ಫರ್ನಿಚರ್ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಅಂಗಡಿಯಿಂದ ನಾನು ಹೇಳಿದಂತೆ ಯಾವುದೇ ಫರ್ನಿಚರ್ ಖರೀದಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.115 ಎಂದು ಗುರುತಿಸಲಾದ ದಾಖಲೆಯನ್ನು ಲೋಕಾಯುಕ್ತ ಪೊಲೀಸರೇ ತಯಾರಿಸಿದ್ದು, ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/- 10-12-2025
(ರಾಜೇಶ್ವರಿ ಎನ್ ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಕೋ-ಆರ್ಡಿನೇಟರ್ ಸಹಿಃ -

Visit **ecourts.gov.in** for updates or download mobile app "**eCourts Services**" from Android or iOS